ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಐವಾನ್.ಎ.ಶಾಹಿ ಬಡಾವಣೆ, ಕಲಬುರಗಿ

ಸಂಖ್ಯೆ: ಸಿ2(2)/ಆಡಳಿತ/ಕಾ.ಮಿ,ಸ್ವ.ವೇ&ಹೆ.ವೇ.ಬಡ್ತಿ/26/2023-24 (I) ದಿನಾಂಕ: 30/01/2024

ಜ್ಞಾಪನ

ವಿಷಯ: ಶಾಲಾ ಶಿಕ್ಷಣ ಇಲಾಖೆಯಲ್ಲಿ ಪ್ರೊಬೇಶನರಿ ಗ್ರೂಪ್.' ಬಿ' ಮುಖ್ಯ ಶಿಕ್ಷಕರಾಗಿ ನೇರ ನೇಮಕಾತಿ ಹೊಂದಿ ಯಾವುದೇ ಬಡ್ತಿ ಇಲ್ಲದೆ 10 ವರ್ಷಗಳ ಕಾಲ ಸತತವಾಗಿ ಸೇವೆ ಸಲ್ಲಿಸಿದ ಪ್ರಯುಕ್ತ ಕಾಲಮಿತಿ ಬಡ್ತಿ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: 1) ಕರ್ನಾಟಕ ಸರ್ಕಾರಿ ಸೇವಾ (ಕಾಲಮಿತಿ ಮುಂಬಡ್ತಿ) ನಿಯಮಗಳು 1983.
2) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 250 ಡಿಪಿಐ 2006 ದಿನಾಂಕ: 22/07/2008.
3) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 464 ಡಿಪಿಐ 2008 ದಿನಾಂಕ: 06/01/2009.
4) ಇಲಾಖಾ ಮುಂಬಡ್ತಿ ಸಮಿತಿ ಸಭೆ ನಡುವಳಿಗಳು ದಿನಾಂಕ: 26/12/2023.

ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ಇವರನ್ನು ಉಲ್ಲೇಖ (2) ರನ್ವಯ ಶಾಲಾ ಶಿಕ್ಷಣ ಇಲಾಖೆಯ ಗ್ರೂಪ್.' ಬಿ' ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳಿಗೆ ನೇಮಕಾತಿ ಪ್ರಾಧಿಕಾರವೆಂದು ನೇಮಿಸಿ ಆದೇಶಿಸಿದೆ. ಸದರಿ ಗ್ರೂಪ್.' ಬಿ' ಅಧಿಕಾರಿಗಳಿಗೆ ಕಾಲಮಿತಿ ವೇತನ ಬಡ್ತಿ ಮಂಜೂರು ಮಾಡಲು ನೇಮಕಾತಿ ಪ್ರಾಧಿಕಾರವೇ ಸಕ್ಷಮ ಪ್ರಾಧಿಕಾರವಾಗಿದ್ದು, ಉಲ್ಲೇಖ (3) ರನ್ವಯ ಇಲಾಖಾ ಮುಂಬಡ್ತಿ ಸಮಿತಿ ರಚಿಸಲಾಗಿದೆ.

ಗ್ರೂಪ್.' ಬಿ' ವೃಂದದ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು /ತತ್ಸಮಾನ ಹುದ್ದೆಯಲ್ಲಿ ಯಾವುದೇ ಮುಂಬಡ್ತಿ ಇಲ್ಲದೆ ಸತತವಾಗಿ 10 ವರ್ಷಗಳ ಸೇವೆ ಪೂರ್ಣಗೊಳಿಸಿರುವ ಅಧಿಕಾರಿಗಳು/ನೌಕರರು ಸಮುಚಿತ ಮಾರ್ಗದ ಮುಖಾಂತರ ಕಾಲಮಿತಿ ವೇತನ ಬಡ್ತಿ ಮಂಜೂರು ಮಾಡುವಂತೆ ಕೋರಿ ಈ ಕಚೇರಿಗೆ ಸಲ್ಲಿಸಿರುವ ಅಗತ್ಯ ದಾಖಲೆಗಳು/ಪ್ರಸ್ತಾವನೆಗಳನ್ನು ಉಲ್ಲೇಖ (1) ರ ನಿಯಮಗಳಡಿ ದಿನಾಂಕ: 26/12/2023 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಪರಿಶೀಲಿಸಿ ನಿರ್ಣಯಿಸಿರುತ್ತಾರೆ. ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಯನ್ವಯ ಉಲೇಖ (1) ರ ನಿಯಮಗಳಲ್ಲಿನ ಷರತ್ತು ಹಾಗೂ ನಿಬಂಧನೆಗಳಿಗೊಳಪಟ್ಟು, ಕಾಲಮಿತಿ ವೇತನ ಬಡ್ತಿಗೆ ಅರ್ಹರಿರುವ ಗ್ರೂಪ್.' ಬಿ' ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳಿಗೆ ಅನುಬಂಧ-1 ರಲ್ಲಿ ಕಾಣಿಸಿದಂತೆ ಸೇವಾವಧಿಯಲ್ಲಿ ಒಂದು ಬಾರಿಗೆ ಮಾತ್ರ ಷರತ್ತಿಗೊಳಪಟ್ಟು ಕಾಲಮಿತಿ ಮುಂಬಡ್ತಿ ವೇತನ ಶ್ರೇಣಿ ಮಂಜೂರು ಮಾಡಿ ವೇತನ ನಿಗದಿಪಡಿಸಿದೆ.

Digitally Signed by Dr.
Akash S
Date: 05-02-2024 16:05:03
Reason: Approved

(ಡಾ. ಆಕಾಶ್ ಎಸ್. ಭಾ.ಆ.ಸೇ)
ಅಪರ ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ ಕಲಬುರಗಿ

ಪ್ರತಿಯನ್ನು:

1) ಮಹಾಲೇಖಪಾಲರು(ಲೆ&ಹ), ಕರ್ನಾಟಕ ಪಾರ್ಕ ಹೌಸ್ ರೋಡ್ ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು.
3) ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಮತ್ತು ಧಾರವಾಡ.
4) ಕಲಬುರಗಿ ವಿಭಾಗದ ಎಲ್ಲಾ ಜಿಲ್ಲಾ ಖಜಾನೆಗಳ ಉಪ ನಿರ್ದೇಶಕರಿಗೆ.
5) ಉಪ ನಿರ್ದೇಶಕರು(ಆಡಳಿತ), ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ, ಬೀದರ, ಬಳ್ಳಾರಿ, ವಿಜಯನಗರ, ಯಾದಗಿರಿ, ಕೊಪ್ಪಳ ಮತ್ತು ರಾಯಚೂರು.
6) ಸಂಬಂಧಿಸಿದ ಡಯಟಗಳ ಉಪನಿರ್ದೇಶಕರು(ಅಭಿವೃದ್ಧಿ) ರವರಿಗೆ.